**ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡುಗಳ ಬಳಕೆಗೆ ಸಂಬಂಧಿಸಿದಂತೆ ಇನ್ನಷ್ಟು ಉದಾರೀಕರಣ**
**ಜನವರಿ 30, 2003**

ನಿವಾಸಿಗಳು, ವ್ಯಕ್ತಿಗಳು ಹಾಗೂ ಕಂಪನಿಗಳು ಭಾರತದಲ್ಲಿನ ಯಾವುದೇ ಕಾರ್ಡು ನೀಡಿಕೆದಾರರಿಂದ ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡ್ ಸೌಲಭ್ಯವನ್ನು ಪಡೆದುಕೊಳ್ಳಬಹುದು. ನೀಡಿಕೆದಾರರು ತಮ್ಮ ಸಾಲ ನೀಡಿಕೆ ನೀತಿಗಳಿಗೆ ಅನುಸಾರವಾಗಿ ಅಂಥ ಕಾರ್ಡುಗಳ ಮೇಲೆ ದೊರೆಯುವ ಸಾಲದ ಮಿತಿಯನ್ನು ನಿಗದಿಪಡಿಸುತ್ತಾರೆ.

ನಿವಾಸಿಗಳು ಚಾಲ್ತಿ ಖಾತೆ ವ್ಯವಹಾರಗಳಿಗಾಗಿ ವಿದೇಶೀ ವಿನಿಮಯವನ್ನು ತೆಗೆಯುವುದನ್ನು ಇನ್ನಷ್ಟು ಉದಾರೀಕರಿಸುವ ಪ್ರಯತ್ನವಾಗಿ, ಖಾಸಗಿ ಪ್ರಯಾಣಕ್ಕೆ ಒಂದು ಕ್ಯಾಲೆಂಡರ್ ವರ್ಷಕ್ಕೆ 10,000 ಅಮೆರಿಕಾ ಡಾಲರುಗಳನ್ನು ಮತ್ತು ವ್ಯಾಪಾರ ಸಂಬಂಧಿ ಪ್ರಯಾಣಕ್ಕೆ ಮತ್ತು ಅಂತರರಾಷ್ಟ್ರೀಯ ಸಮ್ಮೇಳನ/ತರಬೇತಿ/ವೈದ್ಯಕೀಯ ಚಿಕಿತ್ಸೆಗೆ ಸಂಬಂಧಿಸಿದ ಪ್ರಯಾಣಗಳಿಗೆ 25,000 ಅಮೆರಿಕಾ ಡಾಲರುಗಳನ್ನು ಪಡೆಯಲು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿ ಪಡೆಯಬೇಕೆಂದು ಈಗಿರುವ ಅಗತ್ಯವು ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡುಗಳ ಮೂಲಕ ಭರಿಸುವ ವೆಚ್ಚಗಳಿಗೆ ಅನ್ವಯಿಸುವುದಿಲ್ಲವೆಂದು ಅದು ನಿರ್ಧರಿಸಿದೆ. ಈ ಸೌಲಭ್ಯವು ಎಲ್ಲ ನಿವಾಸಿಗಳಿಗೆ, ಕಾರ್ಡು ನೀಡಿಕೆದಾರನು ನಿಗದಿಪಡಿಸಬಹುದಾದ ಸಾಲದ ಮಿತಿಗೆ ಒಳಪಟ್ಟು ಲಭ್ಯವಿರುತ್ತದೆ.

ಕ್ರೆಡಿಟ್ ಕಾರ್ಡುಗಳನ್ನು ಭಾರತದ ಹೊರಗೆ ಅಥವಾ ಒಳಗೆ ಬಳಸುವ ಮೂಲಕ ಭರಿಸಿದ ಖರ್ಚಿನ ಮೇಲೆ ವಿದೇಶೀ ವಿನಿಮಯ ನಿರ್ವಹಣಾ ಅಧಿನಿಯಮದ (ಫೆಮಾ) ಮೇರೆಗೆ ರಿಸರ್ವ್ ಬ್ಯಾಂಕು ಯಾವುದೇ ಪ್ರತ್ಯೇಕ ಗರಿಷ್ಠ ಮಿತಿಯನ್ನು ನಿಗದಿಪಡಿಸಿಲ್ಲವೆಂದು ಸ್ಪಷ್ಟಪಡಿಸಲಾಗಿದೆ.

ರಿಸರ್ವ್ ಬ್ಯಾಂಕಿನ 2002ರ ಜೂನ್ 27ನೇ ದಿನಾಂಕದ ಎಪಿ (ಡಿಐಆರ್ ಸರಣಿ) ಸುತ್ತೋಲೆ ಸಂ. 53ರಲ್ಲಿ ಪ್ರಕಟಿಸಲಾದಂತೆ ವಿದೇಶ ಪ್ರಯಾಣದ ವೆಚ್ಚದ ಜೊತೆಯಲ್ಲಿ ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡುಗಳನ್ನು ಭಾರತದಲ್ಲಿ ಅಧಿಕೃತ ವ್ಯಾಪಾರಿಯಿಂದ ಯಾವ ಉದ್ದೇಶಗಳಿಗಾಗಿ ವಿನಿಮಯವನ್ನು ಖರೀದಿ ಮಾಡಬಹುದೋ ಆ ಯಾವುದೇ ಉದ್ದೇಶಕ್ಕಾಗಿ ಅಂತರ್ಜಾಲದ ಮೂಲಕ ಉಪಯೋಗಿಸಬಹುದು. ಉದಾಹರಣೆಗೆ, ಪುಸ್ತಕಗಳನ್ನು ಆಮದು ಮಾಡಿಕೊಳ್ಳುವುದು, ಡೌನ್‌ಲೋಡ್ ಮಾಡಬಹುದಾದ ತಂತ್ರಾಂಶವನ್ನು ಖರೀದಿ ಮಾಡುವುದು ಅಥವಾ ಎಕ್ಸಿಮ್ ನೀತಿಯ ಅಡಿಯಲ್ಲಿ ಅನುಮತಿಸಬಹುದಾದ ಯಾವುದೇ ವಸ್ತುವನ್ನು ಆಮದು ಮಾಡಿಕೊಳ್ಳುವುದು. ಅಲ್ಲದೆ ಅಂತರ್ಜಾಲದ ಮೂಲಕ ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡುಗಳನ್ನು ಬಳಸಲು ಸರಾಸರಿ ಹಣಕಾಸು ಮಿತಿಯನ್ನು ಪ್ರತ್ಯೇಕವಾಗಿ ನಿಗದಿಪಡಿಸಿಲ್ಲ.

ಆದರೂ, ಅಂತರರಾಷ್ಟ್ರೀಯ ಕ್ರೆಡಿಟ್ ಕಾರ್ಡುಗಳನ್ನು ಲಾಟರಿ ಟಿಕೆಟ್ಟುಗಳು, ನಿಷೇಧಿಸಲಾದ ಅಥವಾ ಬಹಿಷ್ಕರಿಸಲಾದ ನಿಯತಕಾಲಿಕೆಗಳಂಥ ನಿಷೇಧಿತ ವಸ್ತುಗಳನ್ನು ಖರೀದಿಮಾಡಲು, ಪಣ ಹಂಚಿಕೆ ಪಂದ್ಯದಲ್ಲಿ ಭಾಗವಹಿಸಲು, ಹಿಂತಿರುಗಿ ಕರೆ ಮಾಡುವ ಸೇವೆಗಳಿಗೆ ಸಂದಾಯ ಮಾಡುವುದು ಮುಂತಾದವುಗಳಿಗೆ ಅಂತರ್ಜಾಲದ ಮೇಲೆ ಅಥವಾ ಅನ್ಯಥಾ ಬಳಸುವುದು ಸಾಧ್ಯವಿಲ್ಲ. ಏಕೆಂದರೆ ಅಂಥ ವಸ್ತುಗಳಿಗೆ/ಚಟುವಟಿಕೆಗಳಿಗೆ ವಿದೇಶೀ ವಿನಿಮಯ ಬಳಸಲು ಅನುಮತಿಯಿರುವುದಿಲ್ಲ.

ಅಲ್ಪನಾ ಕಿಲ್ಲಾವಾಲಾ
ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2002–2003/800